ಪುನರ್ ಪರಿಶೀಲಿಸಲಾಯಿತು, ಹಾಗೂ ಯಾವುದೇ ವಿಧೇಯಕವನ್ನು ಅಂಗೀಕರಿಸಲಾಯಿತು ಎಂದು ಈ ಮೂಲಕ ತಿಳಿಸುತ್ತಿದ್ದೇನೆ.

ಶಾಸನ ರಚನಾ ಕಾರ್ಯಕಲಾಪಗಳು

(i) ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ, 1995

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) : ಸನ್ಮಾನ್ಯ ಅಧ್ಯಕ್ಷರೇ, "ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕ, 1995ನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ, 1995ನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ) (ತಿದ್ದುಪಡಿ) ವಿಧೇಯಕ, 1995ನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ii) ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕ 1995

ಶ್ರೀ ವೈಜನಾಥ ಪಟೇಲ್ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, "1995ರ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವನೆ ಏನೆಂದರೆ : "1995ರ ಸಾಲಿನ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆಯೇ ಮಾತನಾಡಿದರೆ ಮಾತನಾಡಬಹುದು. ತಮಗೆ ಏನು ನಾನು ಹೇಳುತ್ತೇನೆ ಎಂದರೆ ಈಗ ವಿಧೇಯಕವನ್ನು ಮಂಡಿಸಿದ್ದಾರೆ. ಇದರ ಬಗ್ಗೆ ಚರ್ಚೆಗೆ ಬಂದಾಗ ಮಾತನಾಡುತ್ತೇನೆ. ಬಂದಾಗ ನಾನು ಬೇರೆ ವಿಚಾರ ಕೇಳಬಹುದೇ? ಈಗ ನಾನು ಬೇರೆ ವಿಚಾರ ಕೇಳಬಹುದೇ ತಾವು ಕೇಳಿ ಎಂದರೆ ಕೇಳುತ್ತೇನೆ.

ಅಧ್ಯಕ್ಷರು : ಇನ್ನೊಂದೆರಡು ಬಿಲ್ಸ್‌ಗಳು ಇವೆ. ಪರ್ಯಾಲೋಚನೆಗೆ ತೆಗೆದುಕೊಂಡು ಮುಗಿಸಿಬಿಡೋಣ.